

ನಾನು ಕವಿ ಕೆ.ಎಸ್. ನಿಸಾರ್ ಅಹಮದ್ ಅವರ ಕಟ್ಟಾ ಅಭಿಮಾನಿ, ಆಪ್ತಮಿತ್ರ ಹಾಗೂ ಅವರೇ ಹೇಳುತ್ತಿದ್ದಂತೆ, ಅವರ ಬಲಗೈ ಬಂಟ.

1978ರಲ್ಲಿ ಬೆಂಗಳೂರಿನ ಗಾಂಧಿ ಬಜಾರಿನ ಟ್ಯಾಗೋರ್ ಪಾರ್ಕ್ ಬಳಿ ಒಂದು ಚಿಕ್ಕ ಪತ್ರಿಕೆ ಮತ್ತು ಕಾಂಡಿಮೆಂಟ್ಸ್ ಅಂಗಡಿ (ಸುವರ್ಣ ಸ್ಟೋರ್ಸ್) ತೆರೆದೆ. ದಿನಕಳೆದಂತೆ ಉದ್ಯಾನಕ್ಕೆ ಬರುತ್ತಿದ್ದ ಅನೇಕ ಸಾಹಿತಿಗಳು ನನ್ನ ಅಂಗಡಿಗೂ ಬರತೊಡಗಿ ಅವರ ಪರಿಚಯವಾಯಿತು. ಕೆಲವರನ್ನು ಬಹಳ ತಿಂಗಳು, ವರ್ಷಗಳ ನಂತರದಲ್ಲಿ ಗುರುತಿಸಿ ಪರಿಚಯ ಮಾಡಿಕೊಂಡೆ. ಮಾಸ್ತಿಯವರು ನಮ್ಮ ಅಂಗಡಿಯಲ್ಲಿ ನಿತ್ಯ ಸಂಜೆ ಚಾಕ್ಲೇಟ್ ತಗೊಂಡು ಬಸವನಗುಡಿ ಕ್ಲಬ್‌ಗೆ ಹೋಗುತ್ತಿದ್ದರು. ಲಂಕೇಶ್, ನಿಸಾರ್, ವ್ಯಾಸರಾವ್, ಸುಮತೀಂದ್ರ ನಾಡಿಗ್, ಈಗಿನ ರವಿ ಬೆಳಗೆರೆ ಮತ್ತು ಜಯಂತ ಕಾಯ್ಕಿಣಿ, ಇವರೆಲ್ಲ ನನ್ನ ಅಂಗಡಿಯ ಹೆಮ್ಮೆಯ ಗ್ರಾಹಕರು.

ನಿಸಾರ್ ಅವರಿಗೂ ನನಗೂ ಸುಮಾರು 40 ವರ್ಷಗಳ ಗೆಳೆತನ ಹಾಗೂ ಗುರು ಶಿಷ್ಯರ ಸಂಬಂಧ. ಅವರು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದಾಗ **Evening Herald** ಪತ್ರಿಕೆಯಲ್ಲಿ **'Those who want to Live in Karnataka They must learn Kannada'** ಎಂಬ ಶೀರ್ಷಿಕೆಯ ಲೇಖನ ಪ್ರಕಟವಾಯಿತು. ಅದನ್ನು ಯಥಾವತ್ತಾಗಿ ನಮ್ಮ ಅಂಗಡಿಯ ಗೋಡೆಯ ಮೇಲೆ ಇಂಗ್ಲಿಷ್‌ನಲ್ಲಿ ಬರೆಯಿಸಿ, ಕೆಳಗೆ **K.S. Nisar Ahamad** ಎಂದು ಬರೆಸಿದೆ. ಅನೇಕ ಸಾಹಿತಿಗಳು, ಸಾರ್ವಜನಿಕರು 'ನೀವು